## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** ಸಂಧ್ಯಾ ಸುರಕ್ಷಾ ವೇತನ ಹಾಗೂ ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆಯಡಿ 65 ರಿಂದ 80 ವರ್ಷದೊಳಗಿನ ಫಲಾನುಭವಿಗಳಿಗೆ ರೂ.500 ಗಳ ಪಿಂಚಣಿಯನ್ನು ವಿತರಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ 39 ಡಿಎಸ್‌ಪಿ 2012, ದಿನಾಂಕ: 09.04.2012.

**ಪ್ರಸ್ತಾವನೆ:**

ಮೇಲೆ ಓದಲಾದ ಉಲ್ಲೇಖದನ್ವಯ, ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಾದ ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ, ಸಂಧ್ಯಾ ಸುರಕ್ಷಾ ಯೋಜನೆ, ನಿರ್ಗತಿಕ ವಿಧವಾ ವೇತನ ಹಾಗೂ ಅಂಗವಿಕಲ ವೇತನ (ಅಂಗವೈಕಲತೆಯ ಮಟ್ಟ ಶೇಕಡ 40 ರಿಂದ ಶೇಕಡ 75 ಇರುವರಿಗೆ ಮಾತ್ರ) ದಡಿ 65 ವರ್ಷಕ್ಕೂ ಹೆಚ್ಚು ವಯಸ್ಸಾದ ಫಲಾನುಭವಿಗಳಿಗೆ ಪಿಂಚಣಿ ಮೊತ್ತವನ್ನು ದಿನಾಂಕ:01-04-2012 ರಿಂದ ಜಾರಿಗೆ ಬರುವಂತೆ ರೂ.500ಗಳಿಗೆ ಹೆಚ್ಚಿಸಲಾಗಿದೆ. ಸದರಿ ಆದೇಶವನ್ನು ಜಾರಿಗೊಳಿಸಬೇಕಾಗಿರುತ್ತದೆ.

ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆಯಡಿ OAP 2 ವರ್ಗದಡಿ ಹಾಗೂ ಸಂಧ್ಯಾ ಸುರಕ್ಷಾ ಯೋಜನೆಯಡಿ ಇರುವ ಹಾಲಿ ಫಲಾನುಭವಿಗಳು 65 ವರ್ಷಕ್ಕೂ ಹೆಚ್ಚು ವಯಸ್ಸಿನವರಾಗಿರುವುದರಿಂದ, ರೂ.500 ಗಳ ಪಿಂಚಣಿಯನ್ನು ನೀಡಲು ಹೊಸದಾಗಿ ಫಲಾನುಭವಿಗಳನ್ನು ಗುರುತಿಸಿ ತಾಲ್ಲೂಕಿನ ತಹಸೀಲ್ದಾರರು ಪ್ರತ್ಯೇಕ ಮಂಜೂರಾತಿ ಹೊರಡಿಸುವ ಅಗತ್ಯವಿರುವುದಿಲ್ಲ. ಆದುದರಿಂದ, ಸದರಿ ಯೋಜನೆಗಳಡಿ ಹಾಲಿ ಇರುವ ಫಲಾನುಭವಿಗಳಿಗೆ ರೂ.500 ಗಳ ಪಿಂಚಣಿಯನ್ನು ವಿತರಿಸಲು ಖಜಾನೆ ನಿರ್ದೇಶಕರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲು ಸರ್ಕಾರ ತೀರ್ಮಾನಿಸಿರುವ ಹಿನ್ನಲೆಯಲ್ಲಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಕಂಇ 39 ಡಿಎಸ್‌ಪಿ 2012, ದಿನಾಂಕ:12.06.2012**

ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆ (OAP 2 ವರ್ಗ ಮಾತ್ರ) ಮತ್ತು ಸಂಧ್ಯಾ ಸುರಕ್ಷಾ ಯೋಜನೆಯಡಿ ಹಾಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ರೂ.500(ರೂ.ಐದು ನೂರು ಮಾತ್ರ) ಪಿಂಚಣಿಯನ್ನು ದಿನಾಂಕ:01.04.2012 ರಿಂದ ಅನ್ವಯವಾಗುವಂತೆ ವಿತರಿಸಲು ನಿರ್ದೇಶಕರು, ಖಜಾನೆಗಳು ಇವರಿಗೆ ಈ ಮೂಲಕ ಆದೇಶಿಸಿದೆ.

ನಿರ್ಗತಿಕ ವಿಧವಾ ವೇತನ ಹಾಗೂ ಅಂಗವಿಕಲ ವೇತನ (ಅಂಗವೈಕಲತೆಯ ಮಟ್ಟ ಶೇಕಡ 40 ರಿಂದ ಶೇಕಡ 75 ಇರುವರಿಗೆ ಮಾತ್ರ) ಯೋಜನೆಗಳಡಿ ಬರುವ 65 ವರ್ಷಕ್ಕೂ ಮೇಲ್ಪಟ್ಟ ಎಲ್ಲ ಪಿಂಚಣಿದಾರರಿಗೆ ಪಿಂಚಣಿಯನ್ನು ಹೆಚ್ಚಿಸುವ ಬಗ್ಗೆ ತಹಸೀಲ್ದಾರರು ಪಾಲಿಸಬೇಕಾದ ವಿಧಿ ವಿಧಾನಗಳನ್ನು ಸೂಚಿಸುವ ಬಗ್ಗೆ ಆದೇಶವನ್ನು ನಂತರದಲ್ಲಿ ಪ್ರತ್ಯೇಕವಾಗಿ ಹೊರಡಿಸಲಾಗುವುದು.

...2....

ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆಯಡಿ ಇರುವ (OAP1) ಫಲಾನುಭವಿಗಳು ಈ ಹಿಂದೆ ಪಡೆಯುತ್ತಿದ್ದ ಮಾಸಿಕ 200 ರೂ.ಗಳ ನಿಗಧಿತ ದರದಂತೆಯೇ ಪಿಂಚಣಿಯನ್ನು ಪಡೆಯಲಿದ್ದಾರೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಅಶೋಕ್ ಕುಮಾರ್ ಸಿ.ಮನೋಳಿ)**
**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
**ಕಂದಾಯ ಇಲಾಖೆ.**

**ಇವರಿಗೆ.**

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.
6. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ನಿರ್ದೇಶಕರು,ಖಜಾನೆ ಇಲಾಖೆ, ಬೆಂಗಳೂರು.
9. ಎಲ್ಲಾ ಉಪ ವಿಭಾಗಾಧಿಕಾರಿಗಳು/ಎಲ್ಲಾ ತಹಸೀಲ್ದಾರರುಗಳಿಗೆ.
10. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
11. ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
12. ಹೆಚ್ಚುವರಿ ಪ್ರತಿ ಮತ್ತು ಶಾಖಾ ರಕ್ಷಾ ಕಡತ.